ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ೨.೧೭.೯೦೮ ಹೆಕ್ಟೇರು.

ಆ) ವ್ಯವಸಾಯಕ್ಕಾಗಿ ಅರಣ್ಯ ಜಾಗವನ್ನು ಮೀಸಲಾಗಿ ಇಡುವುದಿಲ್ಲ. ಅರಣ್ಯ ಇಲಾಖೆಯ ಯಾವ ಜಾಗವನ್ನೂ ಅರಣ್ಯೇತರ ಕಾರ್ಯಗಳಿಗೆ ಬಿಡುಗಡೆ ಮಾಡಬೇಕಾದರೆ, ಅರಣ್ಯ ಕಾಯಿದೆ ೧೯೮೦ರ ಪ್ರಕಾರ ಕೇಂದ್ರ ಸರ್ಕಾರದ ಪೂರ್ವ ಅನುಮತಿಯನ್ನು ಅರಣ್ಯ ಇಲಾಖೆಯು ಪಡೆಯಬೇಕಾಗುತ್ತದೆ.

ಚರ್ಮ ಕೈಗಾರಿಕಾ ಡಿಪ್ಲೊಮಾ ಕೋರ್ಸ್ ಬಗ್ಗೆ.

೨೨೯. ಶ್ರೀ ಗೋಪಾಲ ಪಂಂಕದ ಕಾಸಡೆ (ಸಿರ್ಸಿ).—ಮಾನ್ಯ ಭಾರೀ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಚರ್ಮ ಕೈಗಾರಿಕಾ ಡಿಪ್ಲೊಮಾ ವ್ಯಾಸಂಗ ಯಾವ ಶೈಕ್ಷಣಿಕ ವರ್ಷದಿಂದ ಪ್ರಾರಂಭವಾಯಿತು ?

ಆ) ಸದರಿ ಡಿಪ್ಲೊಮಾ ವ್ಯಾಸಂಗದಿಂದ ಎಷ್ಟು ವಿದ್ಯಾರ್ಥಿಗಳು ಶಿಕ್ಷಣ ಮುಗಿಸಿ ಹೊರ ಬಂದಿದ್ದಾರೆ ?

ಇ) ಸದರಿ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಉಪನ್ಯಾಸಕರ ಅಭಾವದಿಂದ ತರಗತಿಗಳು ಸರಿಯಾಗಿ ನಡೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಈ ಎಲ್ಲಾ ನ್ಯೂನತೆಗಳಿಗೆ ಕಾರಣಗಳೇನು ಮತ್ತು ಅವುಗಳನ್ನು ಹೋಗಲಾಡಿಸಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ೧೯೮೩-೮೪.

ಆ) ಈ ತನಕ ಯಾರೂ ಇಲ್ಲ.

ಇ) ಬಂದಿದೆ.

ಈ) ನ್ಯೂನತೆಗಳಿಗೆ ಕಾರಣಗಳು ಈ ಕೆಳಗಿನಂತಿವೆ.

೧) ಇದನ್ನು ನಡೆಸಲು ಬೇಕಾದ ಕಟ್ಟಡ ಮತ್ತು ಉಪಕಾರಣಗಳ ಕೊರತೆ

೨) ಕಚ್ಚಾವಸ್ತುವಿನ ಕೊರತೆ

೩) ತರಬೇತಿಗಾಗಿ ಆವಲಂಬಿಸಿರುವ ಮೈಸೂರು ಕ್ರೋಂ ಟ್ಯಾನಿಂಗ್ ಕಂಪನಿಯ ಕಾರ್ಯಾಚರಣೆಯಂ ವ್ಯಾವಹಾರಿಕ ಬಂಡವಾಳದ ಕೊರತೆಯಿಂದ ಸ್ಥಗಿತಗೊಂಡಿರುವುದು. ಈ ನ್ಯೂನತೆಯನ್ನು ಹೋಗಲಾಡಿಸಲು ಸರ್ಕಾರವು ಚರ್ಮ ತಾಂತ್ರಿಕ ಡಿಪ್ಲೊಮಾ ವಿದ್ಯಾಲಯವನ್ನು ತಾಂತ್ರಿಕ ವಿದ್ಯಾ ಇಲಾಖೆಗೆ ವಹಿಸಿಕೊಡಲು ಯೋಚಿಸಿದೆ. ಸದ್ಯದಲ್ಲಿ ಮೊದಲನೇ ವರ್ಷದ ತರಗತಿಗಳು ಎಸ್.ಜೆ.ಪಿ. ಯಲ್ಲೂ, ೨ನೇ ವರ್ಷದ ತರಗತಿಗಳನ್ನು ಮೈಸೂರು ಕ್ರೋಂ ಟ್ಯಾನಿಂಗ್ ಕಂಪನಿಯಲ್ಲಿ ನಡೆಸಿಕೊಂಡು ಬರಲಾಗುತ್ತಿದೆ.

ವಿಜಯನಗರದ ಉಕ್ಕಿನ ಕಾರ್ಖಾನೆ ಬಗ್ಗೆ.

೪೧೪. ಶ್ರೀ ಯಂ. ಭೂಪತಿ (ಸಂಡೂರು).—ಮಾನ್ಯ ಭಾರೀ ಮತ್ತು ಮಧ್ಯಮ ಕೈಗಾರಿಕೆಗಳಂ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿಜಯನಗರದ ಉಕ್ಕಿನ ಕಾರ್ಖಾನೆ ಸ್ಥಾಪನೆಯಾಗದಿರುವುದಕ್ಕೆ ಸಂಪನ್ಮೂಲಗಳ ಕೊರತೆಯೇ ಕಾರಣವೆಂದು ಕೇಂದ್ರ ಸರ್ಕಾರದವರು ಹೇಳಿರುವುದು ನಿಜವೆ ?

ಅ) ೧೯೮೩ನೇ ಸಾಲಿನಲ್ಲಿ ಮುಖ್ಯಮಂತ್ರಿಗಳು ಆಶ್ವಾಸನೆ ನೀಡಿದ ಪ್ರಕಾರ ಸರ್ವಪಕ್ಷ ಸದಸ್ಯರ ಸಮಿತಿಯನ್ನು ಪ್ರಧಾನ ಮಂತ್ರಿಗಳ ಬಳಿಗೆ ಕಳಿಸಿಸುವ ಬಗ್ಗೆ ಹಾಗೂ ಒಂದು ದಿನದ ''ಕರ್ನಾಟಕ ಬಂದ್''ಗೆ ಕರೆ ಕೊಡುವುದನ್ನು ಕಾರ್ಯರೂಪಕ್ಕೆ ತರಲಾಗಿದೆಯೆ ?

ಆ) ಇಲ್ಲಿಯವರೆಗೆ ವಿಜಯನಗರ ಉಕ್ಕಿನ ಕಾರ್ಖಾನೆಯ ಸ್ಥಾಪನೆಗ ಒತ್ತಾಯಿಸಿ ಕೇಂದ್ರ ಸರ್ಕಾರದೊಂದಿಗೆ ಮಾಡಿದ ಪತ್ರ ವ್ಯವಹಾರ ಹಾಗೂ ಮನವಿಗಳ ವಿವರಗಳನ್ನು ನೀಡುವುದು ?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ಇಂತಹ ಯಾವುದೇ ಸೂಚನೆ ರಾಜ್ಯ ಸರ್ಕಾರಕ್ಕೆ ಬಂದಿಲ್ಲ.

ಆ) ಮತ್ತು ಇ) ವಿಜಯನಗರ ಉಕ್ಕಿನ ಕಾರ್ಖಾನೆಯ ಬಗ್ಗೆ ೧೯೭೦ರಲ್ಲಿ ನಿರ್ಧಾರ ಕೈಗೊಳ್ಳಲಾಗಿದ್ದು ಇದರ ಸ್ಥಾಪನೆ ಬಗ್ಗೆ ಕೇಂದ್ರ ಸರ್ಕಾರವೇ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ರಾಜ್ಯ ಸರ್ಕಾರ ಎಲ್ಲಾ ರೀತಿಯ ಒತ್ತಾಯವನ್ನು ತರುತ್ತಿದೆ.

ಮುಖ್ಯ ಮಂತ್ರಿಗಳು ಈ ಸಂಬಧದಲ್ಲಿ ದಿನಾಂಕ ೧೯-೭-೮೩ ಮತ್ತು ೪-೪-೮೫ರಲ್ಲಿ ಪ್ರಧಾನ ಮಂತ್ರಿಗಳಿಗೂ ಹಾಗೂ ೪-೪-೮೫ ಮತ್ತು ೧೦-೧-೮೬ರಲ್ಲಿ ಕೇಂದ್ರ ಉಕ್ಕು ಮತ್ತು ಗಣಿ ಖಾತೆ ಸಚಿವರಿಗೂ ಪತ್ರ ಬರೆದಿದ್ದಾರೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಆದಾಯ ಖರ್ಚುಗಳ ಬಗ್ಗೆ.

೨೩೩. ಶ್ರೀ ವೇದಾಂತ ಹೆಬ್ಬಾಗೆ(ಕೃಷ್ಣ ರಾಜ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ವಿದ್ಯುತ್ ಇಲಾಖೆಯಿಂದ ವರ್ಷಂಪ್ರತಿ ಬರುತ್ತಿರುವ ಆದಾಯವೆಷ್ಟು ?

ಆ) ಇಲಾಖೆಯ ನೌಕರ ವರ್ಗದವರಿಗೆ ಸಂಬಳ ಸಾರಿಗೆಗಾಗಿ ಖರ್ಚಾಗುತ್ತಿರುವ ಹಣ ವೆಷ್ಟು ?

ಇ) ಕೈಗಾರಿಕೆಗಳು ಮತ್ತು ಇತರೆ ಇಲಾಖೆಗಳಿಂದ ವಿದ್ಯುತ್ ಇಲಾಖೆಗೆ ಬಾಕಿ ಬರಬೇಕಾದ ಹಣವೆಷ್ಟು ?

ಈ) ಹೆಚ್ಚು ವಿದ್ಯುತ್ ಉತ್ಪಾದಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಸಚಿವರು).—

ಅ) ೧೯೮೭-೮೮ರ ಸಾಲಿನಲ್ಲಿ ೬೯೧.೬೫ ಕೋಟಿ ರೂ.ಗಳ ಆದಾಯವನ್ನು ನಿರೀಕ್ಷಿಸಲಾಗಿತ್ತು. ಆದರೆ ಮಳೆ ಬಾರದೆ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಕಡಿಮೆಯಾಗಿರುವುದರಿಂದ ಈಗ ನಿರೀಕ್ಷಿಸಿರುವ ಆದಾಯ ಸುಮಾರು ೪೭೫ ಕೋಟಿ ರೂಪಾಯಿಗಳು.

ಆ) ೧೯೮೭-೮೮ನೇ ಸಾಲಿನಲ್ಲಿ ಇಲಾಖೆ ಸಿಬ್ಬಂದಿಗಳ ಸಂಬಳ ಸಾರಿಗೆ ಬಾಬ್ತು ಆಗಬಹುದಾದ ಅಂದಾಜು ಖರ್ಚು ೧೧೮.೬೭ ಕೋಟಿ ರೂಪಾಯಿಗಳು.

ಇ) ೩೧-೩-೧೯೮೭ರ ವೇಳೆಗೆ ಮಂಡಳಿಗೆ ಕೈಗಾರಿಕೆಗಳಿಂದ, ಖಾಸಗಿಯವರಿಂದ ಸರ್ಕಾರದ ಇಲಾಖೆಗಳಿಂದ ಬರಬೇಕಾಗಿದ್ದ ಒಟ್ಟು ಬಾಕಿ ೧೪೮.೦೬ ಕೋಟಿ ರೂಪಾಯಿಗಳು.

೧ ರಾಜ್ಯ/ಕೇಂದ್ರ ಸರ್ಕಾರದ ಉದ್ದಿಮೆಗಳಿಂದ	೧೩೩.೧೭ ಕೋಟಿ ರೂ.
೨ ಖಾಸಗಿ ಉದ್ದಿಮೆಗಳಿಂದ	೧೪.೮೯ ಕೋಟಿ ರೂ.
ಒಟ್ಟು	೧೪೮.೦೬ ಕೋಟಿ ರೂ.ಗಳು.